## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ವರ್ಗ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಗುಂಡ್ಲುಪೇಟೆ

**ಸಿ ಸಿ ನಂ. 627/2022**

ಫಿರ್ಯಾದುದಾರರು   ಸರ್ಕಾರದ ಪರವಾಗಿ ಗುಂಡ್ಲುಪೇಟೆ ಪೋ. ಠಾಣೆ

ವಿರುದ್ಧ

ಆರೋಪಿತರು

1. ಚಿಕ್ಕತಾಯಮ್ಮ ಕೋಂ ಬೆಳ್ಳಯ್ಯ, **(ಪ್ರತ್ಯೇಕಿಸಲ್ಪಟ್ಟಿದೆ)**
2. ರಾಜು ಬಿನ್ ಲೇಟ್ ಬೆಳ್ಳಯ್ಯ, 51 ವರ್ಷ,
3. ಶಿವಲಿಂಗಯ್ಯ ಬಿನ್ ಲೇಟ್ ಬೆಳ್ಳಯ್ಯ, 54 ವರ್ಷ,
4. ಮಂಗಳಮ್ಮ ಕೋಂ ಲೇಟ್ ಪುಟ್ಟರಾಜು, **(ಪ್ರತ್ಯೇಕಿಸಲ್ಪಟ್ಟಿದೆ)**
5. ಸಂತೋಷ್ ಬಿನ್ ಲೇಟ್ ಪುಟ್ಟರಾಜಯ್ಯ, **(ಪ್ರತ್ಯೇಕಿಸಲ್ಪಟ್ಟಿದೆ)**
6. ಬೆಳ್ಳಮ್ಮ ಕೋಂ ದೊಡ್ಡ ಮಹದೇವಯ್ಯ, 58 ವರ್ಷ,
7. ದೇವರಾಜಮ್ಮ @ ರಾಜಮ್ಮ ಕೋಂ ರಾಜು, 45 ವರ್ಷ,
8. ಶ್ರೀನಿವಾಸ.ಆರ್. ಬಿನ್ ರಾಜು, 24 ವರ್ಷ,

   ಎಲ್ಲಾರ ವಾಸಃ ಮುಂಟೀಪುರ ಗ್ರಾಮ,
   ಗುಂಡ್ಲುಪೇಟೆ ತಾಲ್ಲೂಕು.

## ದೋಷಾರೋಪಣೆ

ಶ್ರೀ ಬಸವರಾಜ ತಳವಾರ. ಬಿಎ., ಎಲ್ ಎಲ್ ಬಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ ಗಳು ಗುಂಡ್ಲುಪೇಟೆ ಆದ ನಾನು ಆರೋಪಿಗಳಾದ ನಿಮ್ಮನ್ನು ಈ ಕೆಳಕಂಡ ಆಪಾದನೆಗಳಿಗೆ ಗುರಿಪಡಿಸುತ್ತೇನೆ.

ಪಿರ್ಯಾದುದಾರರಾದ ಚಿಂತಾಮಣಿ ರವರಿಗೆ ಗುಂಡ್ಲುಪೇಟೆ ತಾಲ್ಲೂಕು, ಮುಂಟೀಪುರ ಗ್ರಾಮದ ಬಳಿ ಸರ್ವೆ ನಂಬರ್ 242 ಪಿ 23 ರಲ್ಲಿ 5.1 ಎಕರೆ ಜಮೀನು ಇದ್ದು, ಸದರಿ ಜಮೀನಿನ ವಿಚಾರವಾಗಿ ಚಾಸಾ-1 ಚಿಂತಾಮಣಿ ರವರಿಗೂ ಆರೋಪಿಗಳಾದ ನಿಮಗೂ ತಕರಾರು ಇದ್ದು, ಈ ಸಂಬಂಧ ಗುಂಡ್ಲುಪೇಟೆ ನ್ಯಾಯಾಲಯದಲ್ಲಿ ಚಾಸಾ-1 ಚಿಂತಾಮಣಿ ರವರ ಪರವಾಗಿ ತೀರ್ಪು ಬಂದಿದ್ದು, ದಿಃ 06.09.2021 ರಂದು ಬೆಳಗ್ಗೆ 11.30 ಗಂಟೆ ಸಮಯದಲ್ಲಿ ಚಾಸಾ-1 ಚಿಂತಾಮಣಿ, ಚಾಸಾ-2 ವಸಂತ, ಚಾಸಾ-3 ಮುತ್ತುರಾಜು ರವರು ತಮಗೆ ಸೇರಿದ ಜಮೀನಿನಲ್ಲಿ ಕಲ್ಲು ಕಂಬ ನೆಡಿಸಲು ಹೋಗಿದ್ದಾಗ, 2, 3, 6 ರಿಂದ 8 ನೇ ಆರೋಪಿಗಳಾದ ನೀವು ಪ್ರತ್ಯೇಕಿಸಲ್ಪಟ್ಟ 1, 4 ಮತ್ತು 5ನೇ ಆರೋಪಿಗಳ ಜೊತೆ ಸೇರಿ ಅಕ್ರಮ ಗುಂಪು ಕಟ್ಟಿಕೊಂಡು ಬಂದು ಅದರ ಸದಸ್ಯರಾಗಿರುತ್ತೀರೆಂದು ಆ ಮೂಲಕ ಭಾ ದಂ ಸಂ ಕಲಂ **143** ಸಹವಾಚಕ **149** ರಡಿಯಲ್ಲಿ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ಎರಡನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಏಕೋದ್ದೇಶದಿಂದ ಚಾಸಾ-1 ಚಿಂತಾಮಣಿ ರವರ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿರುತ್ತೀರೆಂದು ಆ ಮೂಲಕ ಭಾ ದಂ ಸಂ ಕಲಂ **447** ಸಹವಾಚಕ **149** ರಡಿಯಲ್ಲಿ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ಮೂರನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಏಕೋದ್ದೇಶದಿಂದ ಚಾಸಾ-1 ಚಿಂತಾಮಣಿ ರವರ ಜೊತೆ ಜಗಳ ತೆಗೆದು ಗಲಾಟೆ ಮಾಡಿ ನಿಮ್ಮಗಳ ಪೈಕಿ 3 ಮತ್ತು 8 ನೇ ಆರೋಪಿಗಳಾದ ನೀವು ಚಾಸಾ-1 ಚಿಂತಾಮಣಿ ರವರಿಗೆ ಬೋಳಿಮಕ್ಕಳೆ, ಸೂಳೆ ಮಕ್ಕಳೆ ಇದು ನಮ್ಮ ಜಮೀನು ಎಂದು ಹೇಳಿದರೂ ಕೂಡ ನೀವು ಮತ್ತೆ ಬಂದಿದ್ದೀರಾ ಎಂದು ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿರುತ್ತೀರೆಂದು ಹಾಗೂ 6 ಮತ್ತು 7 ನೇ ಆರೋಪಿಗಳಾದ ನೀವು ಪ್ರತ್ತೇಕಿಸಲ್ಪಟ್ಟ 1, 4 ನೇ ಆರೋಪಿಗಳ ಜೊತೆ ಸೇರಿ ಚಾಸಾ-1 ಚಿಂತಾಮಣಿ ಮತ್ತು ಚಾಸಾ-2 ವಸಂತ ರವರಿಗೆ ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿರುತ್ತೀರೆಂದು ಆ ಮೂಲಕ ಭಾ ದಂ ಸಂ ಕಲಂ **504** ಸಹವಾಚಕ **149** ರಡಿಯಲ್ಲಿ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ನಾಲ್ಕನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಏಕೋದ್ದೇಶದಿಂದ ಚಾಸಾ-1 ಚಿಂತಾಮಣಿ ರವರ ಜೊತೆ ಜಗಳ ತೆಗೆದು ಗಲಾಟೆ ಮಾಡಿದ್ದು, ಚಾಸಾ-1 ಚಿಂತಾಮಣಿ ರವರು ಏಕೆ ಈ ರೀತಿ ಬೈಯ್ಯುತ್ತೀರಾ, ಜಮೀನು ನಮ್ಮದು ಎಂದು ನ್ಯಾಯಾಲಯ ತೀರ್ಪು ನೀಡಿದೆ, ಪೊಲೀಸ್ ರಕ್ಷಣೆ ಕೊಡಬೇಕೆಂದು ಕೂಡ ಆದೇಶ ಮಾಡಿದೆ, ಈ ಸಂಬಂಧ ನಿಮ್ಮನ್ನು ಗುಂಡ್ಲುಪೇಟೆ ಪೊಲೀಸ್ ಠಾಣೆಗೆ ಕರೆಯಿಸಿ ನಮ್ಮ ತಂದೆ ತಕರಾರಿಗೆ ಹೋಗಬಾರದು ಎಂದು ಹೇಳಿದ್ದರೂ ಕೂಡ ಈ ರೀತಿ ಗುಂಪು ಕಟ್ಟಿಕೊಂಡು ಬರುತ್ತೀರಲ್ಲ ಎಂದು ಹೇಳಿದ್ದಕ್ಕೆ 2 ಮತ್ತು 3ನೇ ಆರೋಪಿಗಳಾದ ನೀವು ಚಾಸಾ-1 ಚಿಂತಾಮಣಿ ಮತ್ತು ಚಾಸಾ-2 ವಸಂತ ರವರನ್ನು ಜಮೀನಿನಿಂದ ಹೊರಗೆ ಹೋಗಿ ಎಂದು ಕೈಯಿಂದ ಮೈಕೈಗೆ ಹೊಡೆದು ನೋವುಂಟು ಮಾಡಿರುತ್ತೀರೆಂದು ಆ ಮೂಲಕ ಭಾ ದಂ ಸಂ ಕಲಂ **323** ಸಹವಾಚಕ **149** ರಡಿಯಲ್ಲಿ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ಐದನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಏಕೋದ್ದೇಶದಿಂದ ಚಾಸಾ-1 ಚಿಂತಾಮಣಿ ರವರ ಜೊತೆ ಜಗಳ ತೆಗೆದು ಗಲಾಟೆ ಮಾಡಿ 3ನೇ ಆರೋಪಿಯಾದ ನೀವು ಪ್ರತ್ತೇಕಿಸಲ್ಪಟ್ಟ 1ನೇ ಆರೋಪಿಯ ಜೊತೆ ಸೇರಿ ಚಾಸಾ-1 ಚಿಂತಾಮಣಿ ರವರಿಗೆ ಮತ್ತೆ ನಮ್ಮ ಜಮೀನು ಎಂದು ಕೊಂಡು ನಮ್ಮ ಊರಿಗೆ ಬಂದರೆ ನಿಮ್ಮನ್ನು ಒಬ್ಬೊಬ್ಬರಾಗಿ ಕೊಲೆ ಮಾಡಿಬಿಡುವುದಾಗಿ ಕೊಲೆ ಬೆದರಿಕೆ ಹಾಕಿರುತ್ತೀರೆಂದು ಆ ಮೂಲಕ ಭಾ ದಂ ಸಂ ಕಲಂ **506** ಸಹವಾಚಕ **149** ರಡಿಯಲ್ಲಿ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ಮೇಲ್ಕಂಡ  ಆಪಾದನೆಗಳನ್ನು ನೀವು ಈ ನ್ಯಾಯಾಲಯದ ಸಂಜ್ಞಾದೊಳಗೆ  ಎಸಗಿರುವುದಾಗಿ ಈ ನ್ಯಾಯಾಲಯದ ವಿಚಾರಣೆಗೆ ಒಳಪಟ್ಟಿರುವುದಾಗಿ  ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ  27.04.2024

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ
ಗುಂಡ್ಲುಪೇಟೆ